# ಬೃಹತ್ ಕೆಸವೆ !

ಪ್ರಚಲಿತ ಸಂದರ್ಭದಲ್ಲಿ ನ್ಯಾನೋ, ಟೈಟಾನಿಕ್ ಎನ್ನುವ ವಸ್ತುಗಳ ಹಿಂದೆ ಜನ ಮುಗಿ ಬೀಳುತ್ತಿರುವುದು ಸಾಮಾನ್ಯ.

ಆದರೆ ನಿಮಗಿಂತ ನಾನು ಕಿರಿಯನಲ್ಲ ಎಂದು ಸಾರುವ ಪ್ರಕೃತಿ ಆಗೊಮ್ಮೆ, ಈಗೊಮ್ಮೆ ಇಂತಹ ಯಂತ್ರಗಳ ಬಾಯಿ ಮುಚ್ಚಿಸಿ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡುತ್ತದೆ.

ಮೆಕ್ಸಿಕೋ ನಗರದ ವೆರಾಕ್ರುಜ್‌ನ ರಿಯೋ ಬ್ಲಾಂಕೋ ಎನ್ನುವಲ್ಲಿ ಅರಸಿಯಾ ವಂಶಕ್ಕೆ ಸೇರಿದ ಟೈಟನ್ ಅರುಮ್ (Amorphophallus titanium) ಎನ್ನುವ ಹೂ ಎಲ್ಲರ ಗಮನ ಸೆಳೆದಿದೆ. ಮೂರು ಮೀಟರ್ ಅಂದರೆ ಹತ್ತು ಅಡಿಗಳಷ್ಟು ಎತ್ತರವಿರುವ ಈ ಹೂ 150ಕ್ಕೂ ಹೆಚ್ಚು ಪೌಂಡ್ ತೂಕ ಹೊಂದಿದೆ ಎಂದು ಅಲ್ಲಿನ ಸಸ್ಯಶಾಸ್ತ್ರಜ್ಞರು ಹೇಳಿದ್ದಾರೆ. ಇದೇ ಪ್ರಪಂಚದ ಅತ್ಯಂತ ಎತ್ತರದ ಹೂವು ಎನ್ನಲಾಗಿದೆ.

ಸುಮಾತ್ರಾ ಸೇರಿದಂತೆ ಮತ್ತಿತರ ಮಳೆ ಕಾಡುಗಳಲ್ಲಿ ಈ ಹೂ ಬೆಳೆಯುತ್ತದೆ. ಇಂಡೋನೇಷಿಯಾದಲ್ಲಿ ಈ ಕೆಸವೆ ಹೂವಿಗೆ 'ಬಂಗ ಬಂಗಕೈ' ಎಂದು ಕರೆಯುತ್ತಾರೆ.

ಹೂವಿನ ಒಳ ಮೈ ಕಡು ಕೆಂಪಾಗಿದ್ದರೆ, ಹೊರ ಮೈ ಹಸಿರಾಗಿರುತ್ತದೆ. ಹೂವಿನ ಪುಷ್ಪಗುತ್ತಿ ಟೊಳ್ಳಾಗಿದ್ದು ಹಳದಿ ಬಣ್ಣ ಹೊಂದಿರುತ್ತದೆ. 40 ವರ್ಷಗಳಿಗೊಮ್ಮೆ ಅರಳುವ ಈ ಹೂ ಬಹು ಆಕರ್ಷಣೀಯವಾಗಿರುತ್ತದೆ. ಅಲ್ಲದೇ ಅರಳಿದ ಸಮಯದಲ್ಲಿ ಜನರೂ ಸಹ ಇದನ್ನು ಬಹು ಜಾಗ್ರತಿಯಿಂದ ನೋಡಿಕೊಳ್ಳುತ್ತಾರೆ.

ನಮ್ಮಲ್ಲಿನ ಕೆಸವೆ ಹೂ ಬೀರುವ ದುರ್ನಾತವನ್ನೇ ಇವು ಸಹ ಬೀರುತ್ತವೆಯಂತೆ!

–ವಸಂತ್ ಮಾಲವಿ.

